

# ಬ್ಯೂಟಿಫುಲ್ ಪ್ಯಾರಿಸ್; ಲವ್ಲೀ ಬೆಂಗಳೂರು..!

ಫ್ರಾನ್ಸ್‌ನಿಂದ ಬಂದ ಥಾಮಸ್–ಡೆಲ್ಫಿನ್ ಕುಟುಂಬ

ಬೆಂಗಳೂರು ವಿದೇಶೀಯರನ್ನು ಆಕರ್ಷಿಸುವ, ಉದ್ಯಮ, ಉದ್ಯೋಗ, ಶಿಕ್ಷಣಕ್ಕಾಗಿ ಕೈಬೀಸಿ ಕರೆಯುವ ಪ್ರಸಿದ್ಧ ತಾಣ ಎಂಬುದು ಎಲ್ಲರಿಗೂ ಗೊತ್ತು. ಫ್ರಾನ್ಸ್‌ನಿಂದ ಬೆಂಗಳೂರಿಗೆ ಬಂದ ಥಾಮಸ್ ಲೆಫೆಬ್ರೇ ಅವರೂ ಈ ಮಾತಿನಿಂದ ಹೊರತಾಗಿಲ್ಲ.

ಭಾರತಕ್ಕೆ ಬರುವ ಮುನ್ನ ಥಾಮಸ್, ಕಾಂಬೋಡಿಯ, ದಕ್ಷಿಣ ಏಷ್ಯಾ ದೇಶಗಳಲ್ಲೂ ಕೆಲಸ ಮಾಡಿದ್ದರು. ಬೆಂಗಳೂರಿನಲ್ಲಿ ಸಿಗುವ ವಿಫುಲ ಉದ್ಯೋಗಾವಕಾಶದ ಬಗ್ಗೆ ಮಾಹಿತಿ ಪಡೆದ ಅವರು ಈ ನಗರಕ್ಕೆ ಆತುಕೊಳ್ಳುವ ಸಲುವಾಗಿ ಬಂದರು. ಖಾಸಗಿ ಕಂಪೆನಿಯೊಂದರಲ್ಲಿ ಕ್ವಾಲಿಟಿ ಡೈರೆಕ್ಟರ್ ಆಗಿ ಕೆಲಸ ಮಾಡುತ್ತಿದ್ದಾರೆ ಥಾಮಸ್. ಇವರ ಪತ್ನಿ ಡೆಲ್ಫಿನ್, ಮಕ್ಕಳಾದ ಬ್ರೂನೆ ಕಾರ್ಮೆನ್ ಹಾಗೋ ಏಗೊನ್ ಅವರೂ ಇಲ್ಲಿಯೇ ನೆಲೆಸಿದ್ದಾರೆ. ಬೆಂಗಳೂರಿಗೆ ಬರುವ ಮುನ್ನ ಈ ಕುಟುಂಬ ಸುಮಾರು 10 ವರ್ಷ ಕಾಲ ಪ್ಯಾರಿಸ್‌ನಲ್ಲಿ ನೆಲೆಸಿತ್ತು.

ನಾನು 2004ರಲ್ಲಿ ಡೆಲ್ಫಿನ್ ಅವರನ್ನು ಭೇಟಿಯಾದೆ ಪರಿಚಯ ಸ್ನೇಹವಾಗಿ ಮದುವೆಯೂ ಆದೆ. 2005ರಲ್ಲಿ ನಾವು ಪ್ಯಾರಿಸ್‌ಗೆ ಹೋಗಿ ನೆಲೆಸಿದೆವು. ವಿಶ್ವವಿಖ್ಯಾತ ಪ್ಯಾರಿಸ್‌ನ ಐಫೆಲ್ ಟವರ್‌ನಿಂದ ಕೂಗಳತೆಯ ದೂರದಲ್ಲಿ ನಾವು ನೆಲೆಸಿದ್ದ ಅಪಾರ್ಟ್‌ಮೆಂಟ್ ಇತ್ತು' ಎಂದು ನೆನಪಿಸಿಕೊಳ್ಳುತ್ತಾರೆ ಥಾಮಸ್.

ಪ್ಯಾರಿಸ್‌ನ ವಾತಾವರಣಕ್ಕೂ ಇಲ್ಲಿನ ವಾತಾವರಣಕ್ಕೂ ಸಾಕಷ್ಟು ವ್ಯತ್ಯಾಸಗಳಿವೆ ಎನ್ನುವ ಥಾಮಸ್ ಪ್ಯಾರಿಸ್‌ನಲ್ಲಿ ಅತ್ತ ಬಿಸಿಯೂ ಅಲ್ಲದ ಇತ್ತ ತಂಪೂ ಅಲ್ಲದ ವಾತಾವರಣ. ಆದರೆ ಇಲ್ಲಿ ಮೈಮನಕ್ಕೆ ಹಿತವಾಗುವ ಸುಂದರ ಹವಾಮಾನ ಸದಾ ಇರುತ್ತದೆ' ಎನ್ನುತ್ತಾರೆ.

'ಪ್ಯಾರಿಸ್‌ನಲ್ಲಿ ಸುಪ್ರಸಿದ್ಧ ಐತಿಹಾಸಿಕ ಪ್ರವಾಸಿ ತಾಣಗಳಿವೆ. ಎಲ್ಲವೂ ಒಂದಕ್ಕಿಂತ ಒಂದು ಸುಂದರವಾಗಿದ್ದು ವಿಶ್ವದ ಎಲ್ಲ ದೇಶಗಳ ಪ್ರವಾಸಿಗರನ್ನು ಕೈಬೀಸಿ ಕರೆಯುತ್ತದೆ. ಅಷ್ಟೊಂದು ಸುಂದರ ನಗರ ಪ್ಯಾರಿಸ್ ಆಗಿದೆ' ಎಂದು ತಮ್ಮ ತಾಯ್ನೆಲವನ್ನು ಕೊಂಡಾಡುತ್ತಾರೆ ಥಾಮಸ್.

'ಬೆಂಗಳೂರು ಈಸ್ ಎ ಲವ್‌ಲೀ ಕಾಸ್ಮೋಪಾಲಿಟನ್ ಸರ್‌ಪ್ರೈಸ್..' ಎಂದು ವಿಶ್ಲೇಷಿಸುವ ಥಾಮಸ್, ಈ ನಗರ ವಿದೇಶಿಗರಿಗೆ ಸ್ವರ್ಗ. ಅದರಲ್ಲೂ ಫ್ರಾನ್ಸ್, ಪ್ಯಾರಿಸ್‌ನ ಸಾವಿರಾರು ಮಂದಿ ಬೆಂಗಳೂರಿನಲ್ಲೇ ನೆಲೆಯೂರಿದ್ದಾರೆ. ಅಲ್ಲಿನ ಜನರಿಗೆ ಸದಾ 'ಬೆಚ್ಚಗಿನ ಭಾವ'ವನ್ನೇ ಮೂಡಿಸುತ್ತಿದೆ ಈ ಸುಂದರ ಬೆಂಗಳೂರು' ಎನ್ನುತ್ತಾರೆ ಅವರು.

'ಬೆಂಗಳೂರಿನ ಜನ ಅತ್ಯಂತ ಸ್ನೇಹಜೀವಿಗಳು. ಇಲ್ಲಿನ ವಾಸ ಬಹಳ ಖುಷಿ ಕೊಡುತ್ತಿದೆ. ಯಾವ ಸಮಯದಲ್ಲೂ ಏನೇ ಸಹಾಯ ಕೇಳಿದರೂ ಮನಪೂರ್ವಕವಾಗಿ ಮಾಡುತ್ತಾರೆ' ಎಂದು ಕೊಂಡಾಡುತ್ತಾರೆ ಡೆಲ್ಫಿನ್.

'ಶಾಪಿಂಗ್‌ಗೆ ಬೆಂಗಳೂರು ಹೇಳಿ ಮಾಡಿಸಿದ ತಾಣ. ಇಲ್ಲಿನ ಮಾರ್ಕೆಟ್, ರಸೆಲ್ ಮಾರ್ಕೆಟ್.. ಎಲ್ಲವೂ ಫುಡ್ ಶಾಪಿಂಗ್‌ಗೆ ಚೆನ್ನಾಗಿರುವ ಜಾಗ. ಕಾಂಟಿನೆಂಟಲ್ ಫುಡ್ ಕೂಡ ಬೇಕಾದಷ್ಟು ಸಿಗುತ್ತದೆ. ಇಲ್ಲಿನ ಊಟ ತಿಂಡಿಗಳೂ ಬಹಳ ರುಚಿಕರ ಎನ್ನುವುದು ಡೆಲ್ಫಿನ್ ಅನಿಸಿಕೆ.

'ಇಲ್ಲಿನ ಪ್ರತಿದಿನವೂ ಹಬ್ಬದಂತೆಯೇ ಇರುತ್ತದೆ. ನಿಜವಾದ ಹಬ್ಬದ ದಿನವಂತೂ ಅತ್ಯಂತ ಸೋಜಿಗ, ಬೆರಗು ಮೂಡಿಸುವಂತಿರುತ್ತದೆ. ದೀಪಾವಳಿ, ದಸರಾ ಆಚರಣೆ ನೋಡುವುದೇ ಕಣ್ಣಿಗೆ ಹಬ್ಬ. ಕರ್ನಾಟಕ ರಾಜ್ಯೋತ್ಸವ, ಗಣರಾಜ್ಯೋತ್ಸವ, ಸ್ವಾತಂತ್ರ್ಯೋತ್ಸವ ಆಚರಣೆಗಳಂಥ ರಾಷ್ಟ್ರೀಯ ಹಬ್ಬಗಳೂ ವಿಶೇಷ ಮೆರುಗು ನೀಡುತ್ತವೆ. ಇಂತಹ ಸುಂದರ ನಾಡಿನಲ್ಲಿ ನಾವು ಬಂದು ನೆಲೆಸಿದ್ದು ಹೆಮ್ಮೆ ಅನಿಸುತ್ತದೆ' ಎಂದು ಪುಳಕಗೊಳ್ಳುತ್ತಾರೆ ಥಾಮಸ್.

ಎಲ್ಲ ವಿದೇಶೀಯರಂತೆ ಥಾಮಸ್ ಕುಟುಂಬಕ್ಕೆ ತಂದೂರಿ ಚಿಕನ್ ಬಹಳ ಇಷ್ಟವಂತೆ. ನಗರದಲ್ಲಿ ವಿಪರೀತ ಟ್ರಾಫಿಕ್ ಇದ್ದರೂ ಆಟೋರಿಕ್ಷಾ ಚಾಲನೆ ಖುಷಿಕೊಡುತ್ತದಂತೆ. ಇದಕ್ಕಾಗಿಯೇ ಆಟೊ ಖರೀದಿಸಿದ ಥಾಮಸ್ ನಗರವಿಡೀ ಕುಟುಂಬ ಸದಸ್ಯರ ಜತೆಗೆ ಆಟೋದಲ್ಲೇ ಸುತ್ತುತ್ತಾರಂತೆ.

**■ ಅವನೀಶ್**